ಇನ್ನೂ ಹೆಚ್ಚು ಹಣ ಕೊಡಬೇಕೆಂದು ನಾವು ಕೂಡ ಸಂಬಂಧಪಟ್ಟ ಇಲಾಖೆಗಳೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದೇವೆ.

ಶ್ರೀ ಜಿ. ಎ. ಗೌಡ.—ಈಗ ಒದಗಿಸಿರುವ 95 ಲಕ್ಷ ರೂಪಾಯಿಗಳು ಹಳೆಯ ಬಾವಿಗಳಿಗೆ ಸಾಕಾಗುವುದಿಲ್ಲವೆಂದು ಹೇಳಿದಿರಿ. ಒದಗಿಸಿರುವ ಹಣವನ್ನು ಕೂಡ ರಿಲೀಸ್ ಮಾಡಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಬಾವಿಗಳನ್ನು ಪುರು ಮಾಡಿದ್ದೀರಿ ಎಷ್ಟು ಕಂತುಗಳನ್ನು ಕೊಟ್ಟಿದ್ದೀರಿ, ಈಗ ತಗೆದುಕೊಂಡಿರುವ ಬಾವಿಗಳನ್ನು ಪೂರ್ತಿ ಮಾಡಬೇಕಾದರೆ ಎಷ್ಟು ದುಡ್ಡು ಬೇಕು ಎಂದು ಪ್ರತಿ ಜಿಲ್ಲೆಯಿಂದಲೂ ವಿವರಗಳನ್ನು ಕೇಳಿದ್ದೇವೆ. ಇನ್ನೂ ವಿವರಗಳು ನಮಗೆ ಬಂದಿಲ್ಲ. ಅವರಿಂದ ರಿಪೋರ್ಟ್ ಬರುವುದನ್ನು ಕಾದು 60 ಲಕ್ಷ ರೂಪಾಯಿವರೆಗೂ ಆಡ್‌ಹಾಕ್ ಗ್ರಾಂಟನ್ನು ಕೊಟ್ಟಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಮಂತ್ರಿಗಳು ಇದೇ ಸಭೆಯಲ್ಲಿ ಬಾವಿಗಳಿಗೆ ಸಾಲ ಕೊಡುವುದರ ನಂಬಂಧದಲ್ಲಿ ರೂಲ್ಸ್ ಅನ್ನು ಸ್ವಲ್ಪ ನಡಿಲ ಮಾಡುತ್ತೇವೆಂದು ಹೇಳಿರುವುದರಿಂದ ಜನಗಳಿಗೆ ಬಾವಿ ತೋಡಿಸಬೇಕೆಂಬ ಬಗ್ಗೆ ಆಸಕ್ತಿ ಹೆಚ್ಚಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅಭಾವವಿರುವುದರಿಂದ, ಅಲ್ಲಿಯ ಬಾವಿಗಳಲ್ಲಿ ನೀರಿಲ್ಲದೇ ಇರುವುದೆಂದ, ಇದನ್ನು ತುರ್ತುಪರಿಸ್ಥಿತಿ ಎಂದು ಪರಿಗಣಿಸಿ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳಿದುದನ್ನು ಒಪ್ಪಿಕೊಳ್ಳುತ್ತೇನೆ. ನಾವು ಬಾವಿಗಳಿಗೆ ವಿಶೇಷವಾಗಿ, ಬಹಳ ಉದಾರವಾಗಿ ಎಷ್ಟು ಸಾಧ್ಯವೋ ಅಷ್ಟನ್ನೂ ಕೊಡಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರಕ್ಕೂ ಬರೆದಿದ್ದೇವೆ. ಈಚೆಗೆ ಬಾವಿಗಳನ್ನು ತೋಡುವುದಕ್ಕೆ ಸಹಾಯ ಮಾಡುವುದಲ್ಲದೆ ಪಂಪು ಸೆಟ್ಟ್‌ಗಳಿಗೆ ಸಹ ಹಣವನ್ನು ಕೊಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣದ ಅಭಾವವಿದೆ ಎಂದು ಹೇಳಿದರು. ದೇಶದಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವುದರ ಬದಲು ಸಾಮಾನ್ಯ ರೈತನಿಗೆ ಬೆಳೆ ಬೆಳೆಯಲು ಅನುಕೂಲವಾಗ ತಕ್ಕ ಬಾವಿಗಳಿಗೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಗಳಿಗೆ ಹೆಚ್ಚು ಹಣವನ್ನು ಕೊಡಬೇಕು ಎನ್ನುವುದೇ ಸರ್ಕಾರದ ನೀತಿ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಬೆಂಗಳೂರು ಡಿವಿಜನ್‌ನಲ್ಲಿ ಯಾವುದೂ ಹೊಳೆ ಇಲ್ಲ, ಆದ್ದರಿಂದ ಇಲ್ಲಿ ಬಾವಿಗಳಿಗೆ ಹೆಚ್ಚು ಹಣ ಕೊಡಲಾಗುತ್ತಿದೆ ಎಂದು ಹೇಳಿದರು. ರಾಜ್ಯದ ಬಾಕಿ ಕಡೆಯೂ ಆ ರೀತಿ ಹೊಳೆ ಇಲ್ಲದೆ ಪ್ರದೇಶಗಳಿವೆ. ಅಲ್ಲಗೂ ಬಾವಿಗಳಿಗೆ ಸರಿಯಾಗಿ ಹಣವನ್ನು ಕೊಡದೆ ಇದ್ದರೆ ಅವರ ಗತಿ ಏನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಂಡ್ಯ ಜಿಲ್ಲೆಯಲ್ಲ ಕಾವೇರಿ ನದಿ ಹರಿದು ನೀರಾವರಿ ವ್ಯವಸಾಯ ಬಾದರೂ ಅಲ್ಲಯೂ ಒಂದೆರಡು ತಾಲ್ಲೂಕುಗಳಲ್ಲ ನೀರಾವರಿ ಸೌಲಭ್ಯವಿಲ್ಲ ಎನ್ನುವುದು ಗೊತ್ತಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳು ಚಿತ್ರದುರ್ಗ ಅಥವಾ ಕೋಲಾರ ಜಿಲ್ಲೆಗಳ ಯಾವ ತಾಲ್ಲೂಕಿಗೂ ಕಡಮೆ ಇಲ್ಲವೆಂದು ತಿಳಿದು ಆ ತಾಲ್ಲೂಕುಗಳಿಗೆ ಕೊಡುವ ಹಾಗೆಯೇ ತಾಲ್ಲೂಕು ಮಟ್ಟದಲ್ಲ ಹಣವನ್ನು ಕೊಡುತ್ತಿದ್ದೇವೆ.

Opening of a Feeder channel from Jinigehalla to Naikanahatti Hirekere.

*Q.—330. Sri B. L. GOWDA (Challakere).—

Will the Government be pleased to state :—

(a) whether there is a demand by the ryots of Naikanahatti and surrounding villages for opening a feeder channel from Jinigehalla to Naikanahatti Hirekere ;

(b) whether plans and estimates have been prepared in this behalf;

(c) at what stage this project is pending now ?

A.—Sri S. NIJALINGAPPA (Chief Minister).—

(*a*) Yes.

(*b*) No.

(*c*) The project is under investigation.

ಶ್ರೀ ಬಿ. ಎರ್. ಗೌಡ.—ಈ ವಿಷಯ ಯಾವಾಗ ತಮ್ಮ ಗಮನಕ್ಕೆ ಬಂತು, ತಮ್ಮ ರಾಜಕೀಯ ಪ್ರಾರಂಭವಾದಾಗಿನಿಂದಲೂ ಗೊತ್ತಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ರಾಜಕೀಯ ಪ್ರಾರಂಭವಾದದ್ದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಬಹಳ ವರ್ಷಗಳಿಂದ ಎಂದರೆ 10-12 ವರ್ಷಗಳಿಂದ ನನಗೆ ಗೊತ್ತಿದೆ.

ಶ್ರೀ ಬಿ. ಎರ್. ಗೌಡ.—ಇದರ ಬಗ್ಗೆ ಪ್ರಿಲಿಮಿನರಿ ಸರ್ವೆ ಕಾರ್ಯ ಮಾಡಿ ಇದು ಸಾಧುವಾಗಿದೆ, ತೆಗೆದುಕೊಳ್ಳಬಹುದು ಎಂದು ಒಂದು ವರದಿಯನ್ನು ಕೊಟ್ಟಿದ್ದಾರೆ. ಈಗ ಆ ಭಾಗದಲ್ಲಿ ಅಭಾವ ಪರಿಸ್ಥಿತಿ ಇರುವುದು ತಮಗೆ ಗೊತ್ತಿದೆ. ಅಭಾವ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಲು ಮಂಜೂರು ಮಾಡಿದ್ದೀರಿ. ಆದೇ ಹಣದಿಂದ ಈ ನಾಲೆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆ ರಿಪೋರ್ಟಿನಲ್ಲಿ ಸಾಕಷ್ಟು ನೀರು ಒದಗುತ್ತದೆ ಎಂದು ಇದ್ದರೆ ಮಂಜೂರು ಮಾಡುತ್ತೇನೆ. ನನಗೆ ಇನ್ನೂ ರಿಪೋರ್ಟ್ ಬಂದಿಲ್ಲ. ಅದನ್ನು ಕಾಯುತ್ತಿದ್ದೇನೆ. ಕ್ಷಾಮ ಪರಿಸ್ಥಿತಿ ಇರಲಿ, ಹೇಗೇ ಇರಲಿ, ಮಾಡತಕ್ಕ ಕೆಲಸಗಳನ್ನು ಮಾಡಲೇ ಬೇಕಾಗುತ್ತದೆ.

Mr. SPEAKER.—Question No. 331 and 332 will be taken up together.

Grant of Land for Cashew cultivation in Tumkur Taluk.

*Q.—331. Sri K. LAKKAPPA (Hebbur).—

Will the Government be pleased to state:—

(*a*) whether it has come to their notice, that applications received in Tumkur Taluk for the grant of land for cashew cultivation, are being rejected by Local Officers on the ground that the applicants are outsiders even though sufficient lands are available in the taluk for the said purpose;

(*b*) whether they would instruct the concerned officers to consider such applications sympathetically ?

A.—Sri M. V. KRISHNAPPA (Minister for Revenue).—

(*a*) No.

(*b*) Does not arise in view of reply to clause (*a*).

Land available for Distribution as per Darkhast Rules in Tumkur Taluk.

*Q.—332. Sri K. LAKKAPPA (Hebbur).—

Will the Government be pleased to state:

(*a*) the number of acres of suitable land now available in Tumkur Taluk for distribution as per darkhast rules;